ಶ್ರೀ ಜಿ. ನಾರಾಯಣಕುಮಾರ್ ಅವರಿಗೆ ವಿಧಾನ ಸಭೆಯಂ ಪ್ರಸ್ತುತ ಅಧಿವೇಶನಕ್ಕೆ ಗೈರು ಹಾಜರಾಗಲು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಜಿ. ನಾರಾಯಣಕುಮಾರ್ ಅವರಿಗೆ ಅನುಮತಿ ನೀಡಲಾಗಿದೆ.

ಪ್ರಕಟಣೆ

ಸದಸ್ಯರ ಬಂಧನ ಮತ್ತು ಬಿಡುಗಡೆ

ಅಧ್ಯಕ್ಷರು.— ಮತ್ತೊಂದು ಪ್ರಕಟಣೆ ಇದೆ. —

"ವಿಧಾನಸಭಾ ಸದಸ್ಯರಾದ ಶ್ರೀಮತಿ ಮುಕ್ತರುನ್ನೀಸರವನ್ನು ದಿನಾಂಕ ೧೫–೩–೮೮ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಮೈಸೂರಿನಲ್ಲಿ ಬಂಧಿಸಿ ಅದೇ ದಿನ ಸಾಯಂಕಾಲ ೬–೩೦ ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಮೈಸೂರು. ಅವರಿಂದ ನಮಗೆ ಸಂದೇಶ ಬಂದಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಬಾಬುರೆಡ್ಡಿ ವಿ. ತುಂಗಳ್ ಅವರನ್ನು ದಿನಾಂಕ ೬–೩–೮೮ ರಂದು ಬೆಳಿಗ್ಗೆ ೧೧–೩೦ ಗಂಟೆಗೆ ಬೆಳಗಾಂನಲ್ಲಿ ಬಂಧಿಸಲಾಗಿದೆ ಎಂದು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಬೆಳಗಾಂ, ಇವರಿಂದ ನನಗೆ ಸಂದೇಶ ಬಂದಿದೆ.

ನಿಲುವಳಿ ಸೂಚನೆಗಳ ಪ್ರಸ್ತಾವ (ಅನುಮತಿ ಕೋರಿಕೆ)

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದರ ಬಗ್ಗೆ ಮಾತನಾಡಲು ತಾವು ನನಗೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು.—ಅದನ್ನು ರಿಜೆಕ್ಟ್ ಮಾಡಲಾಗಿದೆ ಎಂದು ತಮಗೆ ತಿಳಿಸಿದ್ದೇನೆ. ಆದ್ದರಿಂದ ತಾವು ಈಗ ಏನು ಹೇಳಿದರೂ ಸಹ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಇದು ಬಹಳ ಮುಖ್ಯವಾದ ವಿಚಾರ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನಾದರೂ ಕೊಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರು ತಮ್ಮ ನಿಲುವಳಿ ಸೂಚನೆಯನ್ನು ರಿಜೆಕ್ಟ್ ಮಾಡಿದ್ದೇನೆಂದು ಅವರ ಛೇಂಬರ್‌ಗೆ ತಮ್ಮನ್ನು ಕರೆಯಿಸಿಕೊಂಡು ಹೇಳಿದ್ದಾರೆ. ಆದ್ದರಿಂದ ತಾವು ಬೇರೆ ರೂಪದಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ತಮ್ಮ ತೀರ್ಮಾನವನ್ನು ಪ್ರಶ್ನೆ ಮಾಡುವುದಿಲ್ಲ.

ಅಧ್ಯಕ್ಷರು.—ನೀವು ಏನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಕೊಟ್ಟಿರುವ ನಿಲುವಳಿಯ ಸೂಚನೆಯನ್ನು ಮಾನ್ಯ ಅಧ್ಯಕ್ಷರು ರಿಜೆಕ್ಟ್ ಮಾಡಿದ್ದಾರೆ. ಈ ಬಗ್ಗೆ ನೀವು ಇಲ್ಲಿ ಪ್ರಸ್ತಾಪ ಮಾಡಬಾರದೆಂದು ನಾನು ಹೇಳುವುದಿಲ್ಲ. ನೀವು ನಿಲುವಳಿ ಸೂಚನೆಯನ್ನು ಬಿಟ್ಟು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಿದರೆ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಇಲ್ಲಿ ಇದನ್ನು ಪ್ರಸ್ತಾಪ ಮಾಡಲು ಬೇರೆ ನಿಯಮಗಳು ಸಹ ಇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯವರೆಗೆ ಇದರ ಬಗ್ಗೆ ಏತಕ್ಕೆ ಉತ್ತರ ಕೊಡಲಿಲ್ಲವೆಂದು ಅವರು ಹೇಳುತ್ತಿದ್ದಾರೆ. ಆ ರೀತಿ ಕೇಳುವುದು ತಪ್ಪೇ ?

೧೨-೩೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ. —Please understand. ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ,—ಮಾನ್ಯ ಮುಖ್ಯ ಮಂತ್ರಿಗಳವರು ಸುಮ್ಮನೆ ಇದ್ದಾರೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಟೈಮ್-ಲಿಮಿಟ್‌ನಲ್ಲಿ ತರ್ಜಿ ಕೊಟ್ಟಿದ್ದಾರೆ. ಚೀಫ್ ಮಿನಿಸ್ಟರ್ ಸ್ಪಷ್ಟವಾಗಿ ಹೇಳಿದ್ದಾರೆ. ಒಂದು ತಿಂಗಳ ಅವಧಿಯಲ್ಲಿ ಇದರ ಬಗ್ಗೆ ನಿರ್ಣಯ ತೆಗೆದು ಕೊಳ್ಳುತ್ತೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಒಂದು ತಿಂಗಳ ಅವಧಿ ಇನ್ನೂ ಮುಗಿದಿಲ್ಲ. ಪ್ರಧಾನ್ಯ ಸದಸ್ಯರು ಬೇರೆ ರೂಪದಲ್ಲಿ ಕೇಳುವುದಿದ್ದರೆ ಕೇಳಲಿ, ಅಡ್ಜರ್ನ್‌ಮೆಂಟ್ ಮೋಷನ್ ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯಮಂತ್ರಿಗಳು ಕೆಲವು ಸಾರಿ ತಮ್ಮ ಅನುಕೂಲತೆಗಾಗಿ ಸುಮ್ಮನೆ ಇರುತ್ತಾರೆ. ಆದುದರಿಂದ ಒಂದು ತಿಂಗಳು ಏಕೆ ಸುಮ್ಮನೆ ಇರಬೇಕು ? ಇಂತಹ ಗಂಭೀರವಾದಂಥ ಪ್ರಶ್ನೆ ಇದೆ.

ಅಧ್ಯಕ್ಷರು. —ಅವರು ಎರಡು ನೋಟೀಸ್‌ಗಳನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಆರ್ ಬೊಮ್ಮಾಯಿ.—ಒಂದು ನಿಮಿಷ, ನಾನು ಇನ್ನೂ ಮಾತನಾಡುತ್ತಾ ಇದ್ದೇನೆ. ಒಂದು ತಿಂಗಳು ಟೈಂ ಇದೆ. ಒಂದು ತಿಂಗಳು ಗಡುವು ಕೊಟ್ಟಿದ್ದಾರೆ. ಆ ಒಂದು ತಿಂಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ರಾಜೀನಾಮೆ ಕೊಡಲಿಕ್ಕೆ !

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾಂಗ್ರೆಸ್ ರಾಜ್ಯಗಳಲ್ಲಿ ಇರತಕ್ಕ ಮಂತ್ರಿಗಳ ಮೇಲೆ ಆಪಾದನೆ ಬಂದಿದ್ದಿದನ್ನು ಮುಚ್ಚಿದ್ದಾರೆ, ಈ ಸರ್ಕಾರ ಮುಚ್ಚಿಲ್ಲ ವಿಚಾರಣೆ ಮಾಡುತ್ತಾ ಇದ್ದೇವೆ. ಮಧ್ಯಪ್ರದೇಶ ನೋಡಿ, ರಾಜಾಸ್ಥಾನ ನೋಡಿ, ಒರಿಸ್ಸ ನೋಡಿ ಹೊಲಸೆದ್ದು ನಾರುತ್ತಾ ಇದೆ. ಒಬ್ಬರ ಮೇಲೂ ವಿಚಾರಣೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಂದು ತಿಂಗಳ ಕಾಲ ತೆಗೆದುಕೊಂಡರೆ ಶಾಸನಸಭೆಯಲ್ಲಿ ಪ್ರಸ್ತಾಪ ಮಾಡಬಾರದು ಎಂಬ ಕಾರಣ ಇಟ್ಟುಕೊಂಡಿದ್ದೀರಾ ? ಇದು ಒಂದು. ಎರಡನೆಯದು, ವಿಚಾರಣೆ ಮಾಡಿಸಬೇಕು ಎನ್ನತಕ್ಕಂಥ ವಿಚಾರ ಇದ್ದರೆ ರಾಜೀನಾಮೆ ಕೊಡಿಸುವುದು ಬಿಡುವುದು. ಆದರ ವಿಚಾರ ಒಂದು ಕಡೆ ಇರಲಿ, ಇದನ್ನು ಯಾರಿಗೆ ವಹಿಸಿದ್ದೀರಿ ? ಸಿಒಡಿಗೆ ವಹಿಸಿದ್ದೀರಿ. ಸಿಒಡಿಗೆ ವಹಿಸಿ ನಾವು ವಿಚಾರಣೆ ಮಾಡಿಸುತ್ತೇವೆ, ಒಂದು ತಿಂಗಳು ಇದೆ, ಅಲ್ಲಿಯವರೆಗೆ ಸುಮ್ಮನೆ ಇರಿ ಎಂದು ಸದಸ್ಯರಿಗೆ ಹೇಳಬೇಕು ಎನ್ನುವುದೂ ನಿಮ್ಮ ಅಭಿಪ್ರಾಯವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹಾಗೆ ಹೇಳಲಿಲ್ಲ. ನಾನು ಏನು ಹೇಳಿದೆ ಎಂದರೆ, ಈ ವಿಷಯವನ್ನು ಬೇರೆ ರೂಪದಲ್ಲಿ ಕೇಳಲಿಕ್ಕೆ ಬರುತ್ತದೆ, ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ, ಬೇರೆ ರೂಪದಲ್ಲಿ ಕೇಳಿ ಎಂದು ಹೇಳಿದೆ. ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ ಎಂದು ಅಧ್ಯಕ್ಷರವರು ರಿಜೆಕ್ಟ್ ಮಾಡಿದ್ದಾರೆ, ಈ ವಿಚಾರ ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ. You can ask a question; you can ask it in the form of a shortnotice question or you can ask in any other form.

ಶ್ರೀ ಎಸ್. ಬಂಗಾರಪ್ಪ.—ಈಗ ನಾವೂ ಕೂಡ ನಮ್ಮ ಪಕ್ಷದ ವತಿಯಿಂದ ಈ ವಿಚಾರವನ್ನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕು ಎಂದು ಇಟ್ಟುಕೊಂಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿ.

ಶ್ರೀ ಎಸ್. ಬಂಗಾರಪ್ಪ —ಇವು ಸಾರ್ವಜನಿಕವಾಗಿ ಚರ್ಚೆ ಮಾಡತಕ್ಕಂಥ ವಿಚಾರಗಳೇ. ಪಬ್ಲಿಕ್‌ನಲ್ಲಿ ಈ ವಿಚಾರ ಬಂದಮೇಲೆ, ಒಂದು ಪಕ್ಷದ ಸದಸ್ಯರು ೩ ಜನ ಮಂತ್ರಿಗಳ ಮೇಲೆ ಹೇಳಿದಾಗ ನಾವು ಕುಳಿತುಕೊಳ್ಳತಕ್ಕಂಥ ಸಂದರ್ಭ ಅಲ್ಲ, ಅದನ್ನು ಚರ್ಚೆಗೆ ಒಳಪಡಿಸಲೇಬೇಕು.

ಶ್ರೀ ಎಸ್- ಆರ್. ಬೊಮ್ಮಾಯಿ.—ಸ್ವಾಗತ, ಆದರೆ ಯಾವ ರೂಪದಲ್ಲಿ ತೆಗೆದುಕೊಂಡು ಬರಬೇಕೋ ತೆಗೆದುಕೊಂಡು ಬನ್ನಿ. ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ. ಮಾನ್ಯ ದೇವೇಗೌಡರ ಇತಿಹಾಸ ಕರ್ನಾಟಕಕ್ಕೆ ಗೊತ್ತಿದೆ, ಸೋಮಶೇಖರ್‌ರವರ ವಿಚಾರ ಗೊತ್ತಿದೆ, ಜೇವಿಜಯರವರ ವಿಚಾರ ಗೊತ್ತಿದೆ. ಕೇಳಿ, ಯಾವ ರೂಪದಲ್ಲಿ ಕೇಳಬೇಕೋ ಆ ರೂಪದಲ್ಲಿ ಕೇಳಿ ; ಚರ್ಚೆಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಅದನ್ನು ಹೇಳಿಬಿಟ್ಟಿದ್ದರೆ ಆಗಂತಿತ್ತಲ್ಲ...

ಅಧ್ಯಕ್ಷರು.—ತಾವು ಎರಡು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೀರಿ. ಅದರಲ್ಲಿ ಒಂದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್ವರ್ಟ್ ಮಾಡಿ ಇವತ್ತು ಇಟ್ಟಿದೆ. ಇನ್ನೊಂದನ್ನು ರಿಜೆಕ್ಟ್ ಮಾಡಿದ್ದೇನೆ. ಜನರಲ್ ಡಿಸ್ಕಷನ್‌ನಲ್ಲಿ ಇವತ್ತು ನಿಮ್ಮದು ಇದೆ, ತಾವು ಮಾತನಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ. ಈಗ ಅವರು ಏನು ವಿಷಯ ಎತ್ತಿದರು ಮತ್ತೆ ಮಾನ್ಯ ಬೊಮ್ಮಾಯಿಯವರು ಏನು ಹೇಳಿದರು ಅದು ನಾಳೆ ಬೆಳಿಗ್ಗೆ ರಿಪೋರ್ಟ್ ಆಗುತ್ತದೆ, ಮುಚ್ಚಟ್ಟಿಲಿಕ್ಕೆ ಆಗುವುದಿಲ್ಲ. ಇದನ್ನು ನೀವು ರಿಜೆಕ್ಟ್ ಮಾಡಿದ್ದೇನೆ ಎಂದು ಹೇಳಿದರೂ ನನ್ನ ಭ್ರಷ್ಟಾಚಾರದ ಬಗ್ಗೆ ಅವರು ಎತ್ತಿದ್ದನ್ನು ಹೌಸ್ ಪ್ರೊಸೀಡಿಂಗ್ಸ್‌ನಲ್ಲಿ ತೆಗೆದುಹಾಕಿಲ್ಲ, ಇಷ್ಟೂ ಹೋಗಿದೆ ಅಲ್ಲಿ, I live for something in my life for the last 27 years. ನಾನು ಅಲ್ಲಿ ಕುಳಿತು ಕೆಲಸ ಮಾಡಿದ್ದೇನೆ ನಾನು ಇಷ್ಟೇ ಹೇಳುತ್ತೇನೆ. ಅದು ಕಾಲಿಂಗ್ ಅಟೆನ್‌ಷನ್ ಇರಬಹುದು, ಮತ್ತೊಂದು ಇರಬಹುದು, ಮಗದೊಂದು ಇರಬಹುದು, ಆ ಪ್ರಶ್ನೆಯಲ್ಲ. It is not an issue against the entire Government. It is an issue against three ministers in the Cabinet. I know. Under the relevant provisions of the Rules of procedure you can ask. you can use those provisions. I am here to answer.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ ತಮ್ಮ ಕಾಂಗ್ ಅಟೆನ್‌ಷನ್ ಇದೆ ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.....

ಅಧ್ಯಕ್ಷರು —ನೀವು ಎರಡು ಕೊಟ್ಟಿದ್ದಿರಿ. ಅದರಲ್ಲಿ ಒಂದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್ವರ್ಟ್ ಮಾಡಿದ್ದೇನೆ. ಎರಡನೆಯದನ್ನು ರಿಜೆಕ್ಟ್ ಮಾಡಿದ್ದೇನೆ, ಇಲ್ಲಿ ಬರುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ದಯವಿಟ್ಟು ನಿನ್ನೆ ಹೇಳಿದ ಒಂದು ಮಾತನ್ನು ಜ್ಞಾಪಿಸಿಕೊಳ್ಳಿ ಸ್ವಾಮಿ. ನಿನ್ನೆ ತಾವು ಹೇಳಿದಿರಿ, ನಾಳೆ ತೆಗೆದುಕೊಳ್ಳುತ್ತೇನೆ ಎಂದು. ಬೇಕಾದರೆ ಪ್ರೊಸೀಡಿಂಗ್ಸ್‌ನಲ್ಲಿದೆ ನೋಡಿ.

ಅಧ್ಯಕ್ಷರು.—ಕನ್ಸಿಡರೇಷನ್‌ಗೆ ತೆಗೆದುಕೊಳ್ಳುತ್ತೇನೆ. I have rejected it and intimated the same to you. I have considered it in my chamber and have rejected. I have also intimated the same to you ತೆಗೆದುಕೊಳ್ಳುತ್ತೇನೆ ಅಂದರೆ ಡಿಸ್ಕಷನ್‌ಗೆ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಿನ್ನೆ ನಾಳೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ನಾನು ವಕೀಲಿಗಿರಿ ಮಾಡಿ ಬಂದಿದ್ದೇನೆ ಇಲ್ಲಿ, ನೀವೂ ವಕೀಲಿಗಿರಿ ಮಾಡಿ ಬಂದಿದ್ದೀರಿ. ತೆಗೆದುಕೊಳ್ಳುತ್ತೇನೆ ಅಂದರೆ ಅರ್ಥ ಏನು ? not for discussion but for consideration in my chamber.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ವೆಂಕಟರಾವಯ್ಯನವರು, ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದರು. ಅದು ನಿನ್ನೆ ಅಜೆಂಡಾದಲ್ಲಿ ಇತ್ತು, ಕಾರಣಾಂತರದಿಂದ ನಾನು ಬರಲಿಲ್ಲ. ಇವತ್ತು ಅಜೆಂಡಾದಲ್ಲಿ ಇಲ್ಲ, ಆದರೂ ಅವರು ಕೇಳಿದರೆ ಉತ್ತರ ಕೊಡುತ್ತೇನೆ. ಕಾನೂನುಗಳನ್ನು ಬಿಟ್ಟು ಬೇರೆ ವಿಚಾರ ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ಜಿ ಮಾದೇಗೌಡ.—ಸ್ವಾಮಿ. ಮಾನ್ಯ ದೇವೇಗೌಡರು ಈ ಮನೆಯ ಹಿರಿಯ ಸದಸ್ಯರು. ರೂಲ್ಸ್ ಪ್ರಕಾರ ತಾವು ನಿಲುವಳಿ ಸೂಚನೆಯನ್ನು ರಿಜೆಕ್ಟ್ ಮಾಡಿದ್ದಿರೀ, ಅವರ ಬಗ್ಗೆ ನಾನು ಪ್ರಸ್ತಾಪ

ಮಾಡುವುದಕ್ಕೆ ಹೊಗುವುದಿಲ್ಲ. ಇಲ್ಲಿ ಆರೋಪ ಬಂದಿರುವ ಮೂರು ಜನ ಮಂತ್ರಿಗಳೂ ಇದ್ದಾರೆ. ಮಾನ್ಯ ಬೊಮ್ಮಾಯಿಯವರು ಉತ್ತರ ಪ್ರದೇಶದ ಒರಿಸ್ಸಾ ರಾಜ್ಯಗಳ ಉದಾಹರಣೆ ಕೊಟ್ಟರು. ಅವರ ಬಗ್ಗೆ ತಾವು ಮಾತನಾಡುವುದಕ್ಕೆ ಹೋಗಬೇಡಿ ತಾವು ದೇಶಕ್ಕೆ ನೀತಿ ಹೇಳತಕ್ಕ ಜನ, ನಮಗಿಂತ ದೊಡ್ಡದಾಗಿ ಅಧಿಕಾರ ನಡೆಸುತ್ತೇವೆಂದು ಹೇಳಿದ್ದಕ್ಕೆ ಜನ ನಿಮ್ಮ ಕೈಗೆ ಅಧಿಕಾರ ಕೊಟ್ಟಿದ್ದಾರೆ,

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರು ಕೂಡ ವಿಷಯ ಎತ್ತುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ಮಾದೇಗೌಡ.—ನಾನು ಬೇರೆ ವಿಷಯ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಗೌಡರೇ ನೀವು ಕುಳಿತುಕೊಳ್ಳಿ,

ಶ್ರೀ ಜಿ ಮಾದೇಗೌಡ.—ನಾನು ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಮಾತನಾಡುವುದಿಲ್ಲ. ಸಾಮಾನ್ಯವಾಗಿ ಈ ದೇಶದಲ್ಲಿ ವಾಸನೆ ಬಂದರೂ ಕೂಡ, ಆರೋಪಗಳು ಸತ್ಯವೋ ಅಸತ್ಯವೋ ಮಂತ್ರಿಗಳು ರಾಜೀನಾಮೆ ಕೊಟ್ಟು ತಪ್ಪು ಪುರ್ಯಾದೆಯನ್ನು ಕಾಪಾಡಿಕೊಂಡಿರತಕ್ಕ ನಿದರ್ಶನಗಳು ಇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಆ ನೀತಿ ಇವರಿಗೆ ಅಪ್ಲೈ ಆಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್ —ಸ್ವಾಮಿ, ಈ ವಿಷಯದಲ್ಲಿ ಚರ್ಚೆ ಮಾಡುವುದಾದರೆ, ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಲಿ. ನಾನು ಕೂಡ ಡೆಲ್ಲಿ ಉದಾಹರಣೆ ಕೊಟ್ಟು ಹೇಳಬಲ್ಲೆ. ಅವಾರ್ಡ ಮಾಡಿ ಮುಚ್ಚಿಕೊಂಡು ಹೋಗುವುದಕ್ಕೆ ನಾವು ತಯಾರಿಲ್ಲ. ಈ ಪಂಟ್ಟದಲ್ಲಿ ಚರ್ಚೆ ಬೇಡ.

ಶ್ರೀ ಜಿ. ಮಾದೇಗೌಡ.—ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು.—ಇದರಲ್ಲಿ ಏನಂ ಕ್ಲಾರಿಫಿಕೇಷನ್ ಕೇಳುತ್ತೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಈ ವಿಚಾರವನ್ನು ಮುಕ್ತಾಯ ಮಾಡಿದ್ದೀರಿ.

ಅಧ್ಯಕ್ಷರು.—ನಾನು ಮಾನ್ಯ ಧರ್ಮಸಿಂಗ್ ಅವರನ್ನು ಕರೆದಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ದೇವೇಗೌಡರು ವಿವರಣೆ ಕೊಡಂವುದಕ್ಕೆ ಒಪ್ಪಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನಿವರಣೆ ಕೊಡಲಿ.

ಅಧ್ಯಕ್ಷರು,—ನಾನು ಗೂಲಿಂಗ್ ಕೊಟ್ಟಿದ್ದೇನೆ. ಯಾವ ವಿವರಣೆಯೂ ಇಲ್ಲ.

ಶ್ರೀ ಹೆಚ್.ಡಿ.ದೇವೇಗೌಡ,—ಸಪೋರ್ಟ್‌ಗಿಗಳಾದ ಬೊಮ್ಮಾಯಿಯವರು ಜೆ.ಹೆಚ್ ಪಟೇಲರು ಹೇಳಿದ್ದಾರೆ. ನಾನು ಕಾಂಗ್ರೆಸ್ ರಾಜ್ಯಗಳ ಉದಾಹರಣೆ ಕೊಟ್ಟು ರಕ್ಷಣೆ ಪಡೆಯಲಿಕ್ಕೆ ಇದ್ದಿಲ್ಲ. ಸಮಾಧಾನವಾಯಿತೇ ? It is not an issue against the entire Government. It is an issue against three ministers. I know which are all the facts relevant here. There are relevant provisions under the Rules of Procedure The hon. Members who are sitting in the front row of the Opposition are all experienced. The leader of the opposition was also Speaker once They are all very wellversed with the Rules of Procedure of this House. I do not want to say under which provision the issue has to be tackled. Please bring the issue under the relevant provisions of this House.I do not want to quote any example of corruption either in the Congress rule states or Opposition ruled States, and take shelter under that pretext. I am here to answer to all your querries. I have given for something in my life.

(Interruption)

SRI G. MADE GOWDA.—I fuly agree with you.

SRI H.D. DEVE GOWDA.—If you allow, I cannot keep quiet...

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀ ಆರ್. ವೆಂಕಟರಾಮಯ್ಯನವರ ನಿಲುವಳಿ ಸೂಚನೆ ಏನು ಇದೆ ಅದನ್ನು ಒಪನ್ ಮಾಡಲು ನಾನು ಹೇಳುತ್ತಾ ಇಲ್ಲ. I am not raising that issue. ಶ್ರೀ ದೇವೇಗೌಡರು ಏನು ವಿಚಾರ ಹೇಳಿದರು...

MR. SPEAKER.—The matter has been closed.

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀ ದೇವೇಗೌಡರು ಹೇಳಿದ ಹಾಗೆ ನಿಯಮಾವಳಿಗಳು ಇವೆ. ಆದರ ಪ್ರಕಾರವಾಗಿ ನಾವು ಹೋಗಬೇಕೇ ಹೊರತು ಕಾನೂನಿಗೆ ವಿರೋಧವಾಗಿ, ನಿಯಮಾವಳಿಗೆ ವಿರೋಧವಾಗಿ ಎತ್ತಬೇಕಾದ ಪ್ರಶ್ನೆಯೇ ಇಲ್ಲ. ಆದರೆ ಅದು ಆಕ್ಟ್‌ಗೆ ಇಳಿದಿಲ್ಲ. ಬರೇ ಶಿವಪ್ಪನವರು ಎತ್ತಿದಂತಹ ಅಪಾದನೆ ಮಟ್ಟಕ್ಕೆ ಅದು ಉಳಿದಿಲ್ಲ, ಇದು ಮುಖ್ಯಮಂತ್ರಿಗಳ ಕೈಗೆ ಬಂದಿದೆ. ಈ ಬಗ್ಗೆ ವಿಚಾರಣೆಗೆ ಹಾಕಿದ್ದಾರೆ. ಆದ್ದರಿಂದ ಇದನ್ನು ವಿಚಾರಣೆಗೆ ಹಾಕಿದ ಮೇಲೆ...The Government is seized of the matter There is no question of opening an issue. The issue has already been opened. Pandora's box has already been opened and it is in the court of the Hon'ble Chief Minister and the Hon'ble Chief Minister cannot sleep over the matter...

MR. SPEAKER.—The matter has been closed.

(Interruption)

MR. SPEAKER.—Nothing will be recorded,xxx

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಮಂತ್ರಿಗಳ ಪ್ರಾಮಾಣಿಕತೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಶ್ನೆ ಮಾಡಿದ ಮೇಲೆ...

(ಗೊಂದಲ)

MR. SPEAKER.—The matter is closed.

ಶ್ರೀ ಜೆ. ಹೆಚ್. ಪಟೇಲ್.—ಸನ್ಮಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಚೈಂ ಇನ್ನೂ ಆಗಿಲ್ಲ ಆದ್ದರಿಂದ ಈ ವಿಷಯದ ಬಗ್ಗೆ ಯಾವುದೂ ಕಡತಕ್ಕೆ ಹೋಗಬಾರದು.

(ಗೊಂದಲ)

MR. SPEAKER.—The matter has been closed. ನೀವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. Whatever you have said will be expunged. Nothing will be record. Whatever you say will not be recorded

ಶ್ರೀ ಜಿ ಮಾದೇಗೌಡ.—xxxಮಾನ್ಯ ಅಧ್ಯಕ್ಷರೆ.....

MR. SPEAKER.—Don't record Sri Made Gowda, please resume your seat. you are a Senior-most Member. ನಾನು ಈಗ ಮಾನ್ಯ ಧರ್ಮಸಿಂಗ್‌ರವರನ್ನು ಕರೆದಿದ್ದೇನೆ.

SRI M. VEERAPPA MOILY.—Sir ಈ ಸಚಿವಸಂಪುಟದ ಮಂತ್ರಿಗಳ... ..

MR. SPEAKER.—Nothing will be recorded. The matter has been closed.

(ಗೊಂದಲ)

ಶ್ರೀ ಎಚ್. ಡಿ. ದೇವೇಗೌಡ.—ನಥಿಂಗ್ ಡುಯಿಂಗ್...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ಸ್ ಪ್ರಕಾರ ಚರ್ಚೆ ಮಾಡಲು xxx

---

* (Not recorded as ordered by the chair)

MR. SPEAKER.—I have already closed the matter. Nothing will go on record. ನಾನು ಹತ್ತು ಸಲ ಹೇಳಿದ್ದೇನೆ. ನಾನು ಈಗ ಧರ್ಮಸಿಂಗ್‌ರವರನ್ನು ಕರೆದಿದ್ದೇನೆ. ನೀವು ಏನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ ದಯವಿಟ್ಟು ಕುಳಿತುಕೊಳ್ಳಿ Whatever you have said will not be recorded.

MR. SPEAKER.—No. It will not be recorded You are a senior-most Member. Please resume your Seat.

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು.....

MR. SPEAKER.—No. Nothing will be recorded. The matter has been closed. Nothing will go on record.xxx

ಶ್ರೀ ಕೆ. ಎಚ್ ಪಾಟೀಲ್.—ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು 'ವಿರೋಧ ಪಕ್ಷದವರಿಗೆ ನೈತಿಕ ಬಲ ಇಲ್ಲ' ಎಂದು ಹೇಳಿದರು.....

MR SPEAKER.—I have called Sri Dharm Singh Nothing will go on record now. ವಿಷಯಗಳು ಬಹಳ ಜಾಸ್ತಿ ಇವೆ ಈಗ ಮಾನ್ಯ ಧರ್ಮಸಿಂಗ್ ಅವರು ಗಮನ ಸೆಳೆಯುವ ಸೂಚನೆ ಪ್ರಕಾರ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬೇಕು.....

SRI K. H PATIL —I rise to a point of order. I don't know whether Sri Deve Gowda is charged or not. I am not giving any importance to that. I am not giving any importance to Mr. Hegde or against his charge but I respect the ruling given by the Hon'ble Chair. I heard that Sri Bommai made a statement that we have no moral courage. He will have to withdraw that word otherwise he will be inviting

(Interruption)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುತ್ತೇನೆ ಮಾನ್ಯ ದೇವೇಗೌಡರ ಮೇಲೆ ಗೂಬೆ ಕೂರಿಸತಕ್ಕದು ಚಾರಿತ್ರ್ಯ ವಧೆ ಮಾಡತಕ್ಕದು ನಡೆದಿದೆ.

(Interruption)

SRI K. H. PATIL.—If you are convinced that we have no moral courage we have no place to sit in the assembly and we will get out I have equal or more courage than Sri Bommai.....

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ ನಾನು ಹೇಳಿದಂಥ ವಿಚಾರ ಯಾವುದೇ ಹೇಳಿದೆ ಅಂದರೆ ತಾಪ್ಪು ಈ ವಿಚಾರ ಮುಕ್ತಾಯವಾಯಿತು ಎಂದು ಹೇಳಿದ ಮೇಲೆ ಮಾನ್ಯ ಮೊಯಿಲಿಯವರು ಈ ವಿಷಯವನ್ನು ಸಪ್ಲೆಸ್‌ಮೆಂಟ್‌ನಲ್ಲಿ ಇಡಬೇಕು ಎನ್ನುವುದು ಇದೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದರು..

(ಗೊಂದಲ)

SRI M. VEERAPPA MOILY.—The strategy of the Hon'ble Chief Minister.....

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಮೊಯಿಲಿಯವರ ಚುರುಕು ಬುದ್ಧಿ ನಮಗೆ ಗೊತ್ತಿದೆ. ನಮ್ಮನ್ನು ಒಡೆಯುವ ಕೆಲಸ ಆಗುವುದಿಲ್ಲ.....

---

xxx Not recorded as ordered by the Chair

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ನೀವೇ ಕಂಸಿದು ಬೀಳುತ್ತಿದ್ದೀರಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ ನಾನು ಮಾನ್ಯ ಪಾಟೀಲ್‌ರಿಗೆ ಇಷ್ಟೇ ಹೇಳುತ್ತೇನೆ ಅನೇಕ ಸಲ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಹರಿದು ಹೋದ ಹಳೆಯ ಬಟ್ಟೆಯನ್ನು ಹೊಲಿಯುತಕ್ಕ ದಡ್ಡರು ನಾವಲ್ಲ.....

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ,— ಮೈಮೇಲೆ ಬಟ್ಟೆ ಇಲ್ಲದೆ ಇರತಕ್ಕ ಜನರು ಇದ್ದಾರೆ ಆದ್ದರಿಂದ, ಅವರಿಗೆ ಹರಿದಂಹೋದ ಬಟ್ಟೆಬಗ್ಗೆ ಚಿಂತೆ ಇಲ್ಲ. ನಿಯಮದ ಪ್ರಕಾರ ಮಾನ್ಯ ದೇವೇಗೌಡರು ಹೇಳಿದರು, ಈ ದೃಷ್ಟಿಯಿಂದ ನಾನು ಮಾನ್ಯ ಪಾಟೀಲ್‌ರವರಿಗೆ ಮನಸ್ಸು ನೋವು ಮಾಡಬೇಕೆಂದು ಹೇಳಲಿಲ್ಲ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ಈಗ ಒಂದು ನಿಮಿಷ ತಾಳಿ. ನವಂಗೆ ನೈತಕ ಬಲ ಇಲ್ಲ ಎಂದು ಹೇಳಿರತಕ್ಕದ್ದು ರೆಕಾರ್ಡ್‌ನಲ್ಲಿ ಹೋಗಿದೆ. ನವಂಗೆ ನೈತಿಕ ಬಲ ಇಲ್ಲವೆಂದು ಹೇಳಿರುವವರು ನಾವಲ್ಲ. ಅದನ್ನು ನಾವಲ್ಲ ಹೇಳಿರುವುದು. ಮಾನ್ಯ ಮಂಖ್ಯಿ ಮಂತ್ರಿಯವರೇ ಹೇಳಿದ್ದಾರೆ. ನನ್ನ ಮಂತ್ರಿಗಳು ಕರಪ್ಟ್, ನನ್ನ ಅಸೆಂಬ್ಲಿ ಮೆಂಬರ್ಸ್ ಕರಪ್ಟ್, ನನ್ನ ಆಫೀಸ್...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೌದು ಅವರೇ ಹೇಳಿರುವವರು. ಅದನ್ನು ನಾವಲ್ಲ ಹೇಳಿರುವುದು.

(ಗೊಂದಲ)

ಅಧ್ಯಕ್ಷರು,—ಅವರು ಮಾತನಾಡುವುದಕ್ಕೂ ನೀವು ಬಿಡುತ್ತಿಲ್ಲ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ನವಂಗೆ ವಿತಕ್ಕೆ ನೈತಿಕ ಬಲ ಇಲ್ಲ. ಅವರು ಹೇಳಿದರು. ಎಲ್ಲಾಹಂಚಿ ಹೋಗಿದೆ. ವಾಸನೆ ಬರುತ್ತಿದೆ, ದುರ್ನಾತ ಬರುತ್ತಿದೆ ಎಂದು ಹೇಳಿದವರು ಯಾರು ? ಅವರು ಎಷ್ಟು ಗ್ಯಾಲನ್ ಸೆಂಟ್ ಹಾಕಿಕೊಂಡು ಬಂದಿದ್ದಾರೆ ? ಮಾನ್ಯ ಮುಖ್ಯಮಂತ್ರಿಗಳು ಇವರಿಗೆಲ್ಲಾ ಎಷ್ಟು ಸವರಿದ್ದಾರೆ ಎಂಬುದನ್ನು ಹೇಳಬೇಕು. ನಾವು ಯಾರೂ ಬಟ್ಟೆ ಇಲ್ಲದಿರುವವರಲ್ಲ. ಬಟ್ಟೆಯನ್ನು ಹೊಲಿಯುವವರೂ ಅಲ್ಲ. ಬಟ್ಟೆ ಇದೆಯೆಂದು ಅದನ್ನು ಬಿಚ್ಚಿಕೊಂಡು ಓಡಾಡುವ ಜನರಂತೂ ಮೊದಲೇ ಅಲ್ಲ. ಆದ್ದರಿಂದ ಇಲ್ಲಿ ಕುಳಿತಿರುವವರಿಗೆ ನೈತಿಕ ಬಲ ಇಲ್ಲ ಎಂದೂ ಅವರು ಹೇಳಿದರೆ ನಾವು ಸುಮ್ಮನೆ ಬಿಡುವುದಕ್ಕೆ ಸಾಧ್ಯವಿಲ್ಲ. ನವ್ಮವರಿಗೆ ನೈತಿಕ ಬಲ ಇದೆ. ಆ ನೈತಿಕ ಬಲ ಇರುವುದರಿಂದಲೇ ಇಲ್ಲಿ ನಾವು ಕುಳಿತಿರುವುದು...

ಶ್ರೀ ಜೆ.ಎಚ್. ಪಟೇಲ್.— ಈಗ ಆ ಚರ್ಚೆ ಬೇಡ. ಯಾರಿಗೆ ಏನು ಬಲ ಇದೆ, ಯಾರಿಗೆ ಬಲ ಇಲ್ಲ ಎಂಬುದನ್ನು ಆಮೇಲೆ ಮಾತನೋಡೋಣ. ಈಗ ಚರ್ಚೆ ಆಗಲಿ.

(ಗೊಂದಲ)

ಶ್ರೀ ಪಟವಾಕ್ಕಿ ರತ್ನಾಕರ್.— ಆ ಪದವನ್ನು ಅವರು ವಾಪಸು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ನಥಿಂಗ್ ಎಲ್ ಬಿ ರೆಕಾರ್ಡೆಡ್. ಬೇರೆ ರೂಪದಲ್ಲಿ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಬೇರೆ ರೂಪದಲ್ಲಿ ಎಂದರೆ ಏನು ಎಂಬುದು ಅವರಿಗೆ ಗೊತ್ತಿದ್ದರೆ ಹೇಳುತ್ತಾರೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅವರು ಹೇಳಿರುವ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಮಗೆ ನೈತಿಕ ಬಲ ಇಲ್ಲವೆಂದು ಅವರು ಹೇಳಿದ್ದಾರೆ. ಅವರು ಯಾವ ಆಧಾರದ ಮೇಲೆ ಇದನ್ನು ಹೇಳಿದ್ದಾರೆ?

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್. ತಾವು ಕೂಡುಕೊಳ್ಳಿ. That mater has been closed. I will not allow anybody. Nothing will be record. ನಾನು ಯಾರಿಗೂ ಅವಕಾಶವನ್ನೇ ಕೊಡುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳುತ್ತೀರೋ ಇಲ್ಲವೋ ? ಆ ಕಡೆಯ ಅನುಭವಸ್ಥರೂ ಮಾತನಾಡಿದ್ದಾರೆ. ಈ ಕಡೆಯ ಅನುಭವಸ್ಥರೂ ಮಾತನಾಡಿದ್ದಾರೆ. ಧರ್ಮಸಿಂಗ್‌ರವರೇ ಈಗ ನೀವು ಕೇಳಿ.

(ಗೊಂದಲ)

ಶ್ರೀ ಪಟವಾಕ್ಕಿ ರತ್ನಾಕರ್.—ಅವರು ಹೇಳಿರತಕ್ಕ ಮಾತನ್ನು ವಾಪಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು —ನಥಿಂಗ್ ವಿಲ್ ಬಿ ರೆಕಾರ್ಡೆಡ್. ನೀವು ಏನು ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ. ಈ ಸದನದ ಟೈಂನ್ನು ಹೀಗೇ ಕಳೆಯಬೇಕೆನ್ನುವುದಾದರೆ ನೀವು ನಾಲ್ಕು ಜನರೂ ಹೀಗೆ ನಿಂತುಕೊಳ್ಳಿ.

ಶ್ರೀ ಕೆ.ಹೆಚ್. ಪಾಟೀಲ್.—ನಾವು ಯಾವ ಪ್ರಶ್ನೆಯನ್ನು ಕೇಳಿದರೆ ಏನು ? ಅವರು ಉತ್ತರವನ್ನು ಹೇಳಿದರೆ ಏನು ? ಭಾಷಣವನ್ನು ಮಾಡಿದರೆ ಏನು?

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್. ಈಗ ಧರ್ಮಸಿಂಗ್‌ರವರನ್ನು ನಾನು ಕರೆದಿದ್ದೇನೆ. ಅವರನ್ನು ಕಾಲಿಂಗ್ ಅಟೆನ್‌ಷನ್‌ಗೆ ಕರೆದಿದ್ದೇನೆ. ಅವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು.—ನಂಥಿಗ್ ವಿಲ್ ಬಿ ರೆಕಾರ್ಡೆಡ್. ನಥಿಂಗ್ ವಿಲ್ ಬಿ ರೆಕಾರ್ಡೆಡ್. ಅವರು ಬೇರೆ ರೂಪದಲ್ಲಿ ತನ್ನಿ ಎಂದು ಹೇಳಿದ್ದಾರೆ ಈಗಾಗಲೇ ನಾನು ರೂಲಿಂಗ್‌ನ್ನು ಕೊಟ್ಟಿದ್ದಾಗಿದೆ. ಅವರು ಬೇರೆ ರೂಪ ಎಂದು ಹೇಳಿದ್ದಾರೆ. ಯಾವ ರೂಪ ಎಂದು ಅವರಿಗೆ ಗೊತ್ತು. ಆದ್ದರಿಂದ ದಯವಿಟ್ಟು ಕುಳಿತುಕೊಳ್ಳಿ. ನಾನು ಯಾರಿಗೂ ಅವಕಾಶವನ್ನು ಕೊಡುವುದಿಲ್ಲ. ಈಗ ಮಾನ್ಯ ಧರ್ಮಸಿಂಗ್‌ರವರ ಕಾಲಿಂಗ್ ಅಟೆನ್‌ಷನ್...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ನಮ್ಮನ್ನು ಹೆದರಿಸುವುದು ಮಾಡಬಾರದು. ಅವರ ಸದಸ್ಯರಿಗೆ ಅವರು ಹೆದರಿಸಿಕೊಳ್ಳಲಿ. ತಾವು ರೆಕಾರ್ಡ್ ನೋಡಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ರೆಕಾರ್ಡ್‌ನಲ್ಲಿ ಏನಿದೆ ನೋಡೋಣ. ನಾನೂ ನೋಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ನಾನೂ ರೆಕಾರ್ಡ್ ತರಿಸಿ ನೋಡುತ್ತೇನೆ, ಅಂಥಾದ್ದು ಏನಾದರೂ ಇದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ನೋಡಿ ಈಗ ಅವರು ಆಡಬಾರದ್ದನ್ನು ಏನಾದರೂ ಆಡಿದ್ದರೆ ಅದನ್ನು ತರಿಸಿ ನೋಡುತ್ತೇನೆ. ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ. ಈ ಕಡೆಯವರೇ ಇರಲಿ. ಆ ಕಡೆಯವರೇ ಇರಲಿ ಆಡಬಾರದ್ದನ್ನು ಆಡಿದ್ದರೆ ನಾನು ಅದನ್ನು ತರಿಸಿ ನೋಡುತ್ತೇನೆ ಈಗ ಮಾನ್ಯ ಧರ್ಮಸಿಂಗ್‌ರವರು ಮಾತನಾಡಲು ಕರೆದಿದ್ದೇನೆ. ಮಾನ್ಯ ಮಾದೇಗೌಡರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟು ಆಗಿದೆ. ಏಂಥದ್ದೇನಾದರೂ ಇದ್ದರೆ ಅದನ್ನು ಅಧಿಕೃತ ವರದಿಯಿಂದ ತೆಗೆಯಿಸುತ್ತೇನೆ. ಈಗ ತಾವು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಇವರು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೆ. ಇದರಲ್ಲಿ ಪಾಯಿಂಟ್ ಆರ್ಡರ್ ಪ್ರಶ್ನೆಯೇ

ಬರುವುದಿಲ್ಲ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ದಯವಿಟ್ಟು ತಾವು ಕುಳಿತು ಕೊಳ್ಳಿ.

ಶ್ರೀ ಎಂ. ರಘುಪತಿ —ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವಂತೆಯೇ ಇಲ್ಲ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟು ಆಗಿದೆ. ಆಡಬಾರದ್ದು ಆಡಿದ್ದರೆ ಅದನ್ನು ತೆಗೆಸುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಸ್ಪೀಕರ್‌ರವರು ರೂಲಿಂಗ್ ಕೊಟ್ಟಮೇಲೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದನ್ನು ಕೇಳಿಯೂ ಇಲ್ಲ. ನೋಡಿಯೂ ಇಲ್ಲ ಮಾನ್ಯ ಸದಸ್ಯರು ಹೊಸ ವಿಷಯವೆದ್ದರೆ ರೈಸ್ ಮಾಡಲಿ, ಮಾನ್ಯ ವೆಂಕಟರಾವಯ್ಯನವರ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಾಗಿದೆ. ಅವರು ಕೊಟ್ಟಿರುವ ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವಂತೆ ಇಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಾದೇಗೌಡರೇ ಕೇಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಪದೇ ಪದೇ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಬರುವುದಿಲ್ಲ. ತಾವು ಮಾನ್ಯ ಧರ್ಮಸಿಂಗ್‌ರವರನ್ನು ಮಾತನಾಡಲು ಕರೆದಿದ್ದೀರಿ. ಅವರು ಮಾತನಾಡಿದ ಮೇಲೆ ಅವರು ಮಾತನಾಡಲಿ.

ಅಧ್ಯಕ್ಷರು.—ಮಾನ್ಯ ಮಾದೇಗೌಡರೇ ತಾವು ಆಗದಿ ಸೀನಿಯರ್ ಮೋಸ್ಟ್ ಮೆಂಬರ್ ಇದ್ದೀರಿ. ತಾವು ಪಾಯಿಂಟ್ ಆಫ್ ಆರ್ಡರ್ ಎತ್ತಿರುವುದರಲ್ಲಿ ಏನೂ ಇಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಾನು ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ ಎಂದು ಹೇಳಿದ್ದೇನೆ ಅವರು ಎದ್ದು ಕಾಲಿಂಗ್ ಅಟೆಂಕ್ಷನ್ ಕೇಳಿದಾಗ ಆಗ ಏನಾದರೂ ಬಂದರೆ ಕೇಳೋಣ. ಮಾದೇಗೌಡರೇ ತಾವು ಏನು ಮಾತನಾಡಲಾಗುವುದಿಲ್ಲ. I have got highest regard for you. ದಯವಿಟ್ಟು ಕುಳಿತುಕೊಳ್ಳಿ. You are the seniormost member.

SRI G. MADEGOWDA.—Why Mr. Ragupathy is advising you, ಅವರೇನು ಸರ್ವಜ್ಞರೇ ?

ಅಧ್ಯಕ್ಷರು.—ಈಗ ಯಾರು ಏನೇ ಹೇಳಿದರು ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ ಧರ್ಮಸಿಂಗ್‌ರವರನ್ನು ಕರೆದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ..

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಈಗ ತಾವು ಅವರ ಪರವಾಗಿ ವಕಾಲತ್ತು ವಹಿಸುವುದು ಬೇಡ.

ಶ್ರೀ ಎಸ್. ಬಂಗಾರಪ್ಪ —ನಾನು ಒಂದು ವಿಚಾರ ಹೇಳುತ್ತೇನೆ.

ಅಧ್ಯಕ್ಷರು:—ದಯವಿಟ್ಟು ಬೇಡ ಏನೂ ಬೇಡ ಯಾರಿಗೂ ಆಲೋ ಮಾಡುವುದಿಲ್ಲ ಈಗ ನೀವು ಮಾತನಾಡಲಿಕ್ಕೆ ಎದ್ದರೆ ಅವರೂ ಕೂಡ ಮಾತನಾಡಲಿಕ್ಕೆ ಬಿಳುತ್ತಾರೆ, ವಿಚಾರವೂ ಬೇಡ ಆಚಾರ ಬೇಡ. ಮಾನ್ಯ ಧರ್ಮಸಿಂಗ್‌ರವರು ಕಾಲ್ ಅಟೆಂಕ್ಷನ್ ಬಿಳಲಿ ಆಮೇಲೆ ನೋಡೋಣ. ಯಾರ ಸಲಹೆಯೂ ಬೇಕಾಗಿಲ್ಲ.

೧-೦೦ ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ.— ಶ್ರೀಮತಿ ನಾಗರತ್ನಮ್ಮನವರು ಹೊರಗೆ ಹೋದರು. ಯಾರಾದರೂ ಚಾರ್ಜ್ ಮಾಡಿರಲಿ, ಅದು ನಿಮಗೆ ಗ್ರಾಸ. ಮಾನ್ಯ ಮುಖ್ಯ ಮಂತ್ರಿಗಳ ಚಾರ್ಜ್ ಬಗ್ಗೆ ಹೇಳಿದ್ದರು. ನಾನು ನಿಮ್ಮ ಜಾಗದಲ್ಲೇ ಕುಳಿತಿದ್ದರೆ ವಿಷಯವನ್ನು ಬಿಡುವವನಲ್ಲ. ನಿಮ್ಮ ಆಪಾದನೆಯನ್ನು ನಾನು ಆಕ್ಸೆಪ್ಟ್ ಮಾಡುವುದಕ್ಕೆ ತಯಾರಿದ್ದೇನೆಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಎಷ್ಟು ಬಹಿರಂಗವಾಗಿ ಹೇಳಿದರೂ ಅಷ್ಟೇ ಬಹಿರಂಗವಾಗಿ ನಾವೂ ಹೇಳುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.— ಈ ಕಡೆಯವರು, ಆ ಕಡೆಯವರು, ಹೊರಗಿನವರು, ಒಳಗಿನವರು ಯಾರೇ ಆಪಾದನೆ ಮಾಡಲಿ I am prepared to accept.

SRI K.H. PATIL.— We are not going to accept unless it is revealed.

SRI H.D. DEVEGOWDA.— There is a stick, you beat the ruling party. The stick is in your hands, you use it.

ಶ್ರೀ ಜಿ. ಮಾದೇಗೌಡ.— ಯಾರು ಬೇಕಾದರೂ ಮಾತನಾಡಬಹುದು, ಆದರೆ ನಾನು ಮಾತ್ರ ಮಾತನಾಡಬಾರದೆ?

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ, ಈಗ ನೀವು ಮಾತನಾಡುವುದಕ್ಕೆ ಅವಕಾಶ ಇಲ್ಲ. ಆ ವಿಷಯ ಮುಗಿದಿದೆ. ಮಾನ್ಯ ಪೊಯಿಲಿಯವರಿಗಾಗಲಿ ಪಾಟೀಲರಿಗಾಗಲಿ, ಬಂಗಾರಪ್ಪನವರಿಗಾಗಲಿ ವಿಷಯ ಮುಗಿದಿದೆ ಎಂದೂ ಹೇಳಿದ್ದೇನೆ. ಮುಂದಿನ ಗವರ್ನರ್ ಸೆಳೆಯುವ ಸೂಚನೆಯನ್ನು ಧರ್ಮಸಿಂಗ್‌ರವರು ಕೇಳುವುದು.

ಶ್ರೀ ಎಸ್. ಬಂಗಾರಪ್ಪ.— ನೀವು ಹೇಳಿದ್ದು ಇಷ್ಟೆಂದೂ ಅಲ್ಲ. ಅವರೂ ಕೂಡ ಹಿರಿಯ ಸದಸ್ಯರು ವಿಷಯ ಹೇಳುತ್ತಾರೆ ಕೇಳಿ. ಕೇಳಿದರೆ ಏನು ಪ್ರಪಂಚ ಮುಳುಗಿ ಆಕಾಶ ಕಳಚಿ ಬೀಳುತ್ತದೆಯೇ?

ಅಧ್ಯಕ್ಷರು.— ಛೇಂಬರಿಗೆ ಬಂದು ಮಾತನಾಡಿ ಎಂದರೆ ಬರೀ ಹಠ ಹಿಡಿಯುತ್ತೀರಲ್ಲ! ನನ್ನ ಹಠ ಯಾವಾಗಲೂ ನಿಯಮಾವಳಿಗಳ ವ್ಯಾಪ್ತಿಯಲ್ಲಿರುತ್ತದೆಯೇ ಹೊರತು ನಿಯಮದ ಹೊರಗಿರುವುದಿಲ್ಲ. The matter has been closed. I have called Sri Dharam Sing to speek. ಈಗ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಮಾನ್ಯ ಖರ್ಗೆಯವರಿಗೂ ಇದೇ ಮಾತನ್ನು ಹೇಳಬೇಕಾಗುತ್ತದೆ. ಅವರಷ್ಟು ನೀವು ಶಾಸನ ಸಭೆಯಲ್ಲಿ ಇಲ್ಲದಿದ್ದರೂ ನಿಮಗೆ ಸಾಕಷ್ಟು ಅನುಭವ ಇದೆ. ನೀವು ಹಿರಿಯ ಸದಸ್ಯರು ಎಂದು ಹೇಳಿದ್ದೇನೆ.

SRI G. MADEGOWDA — I want a definite reply.

(INTERRUPTION)

ಶ್ರೀ ಜಿ. ಮಾದೇಗೌಡ.— ಹಾಗಾದರೆ ಈ ಮಾನೆಯಲ್ಲಿ ಯಾರೂ ಕ್ರಿಯಾಲೋಪವನ್ನು ಎತ್ತಬಾರದು ಎಂದು ರೂಲಿಂಗ್ ಕೊಡಿ.

ಅಧ್ಯಕ್ಷರು.— ಈಗಾಗಲೇ ನಾನು ಒಂದು ರೂಲಿಂಗ್ ಕೊಟ್ಟು ವಿಷಯ ಮುಕ್ತಾಯವಾಗಿದೆ ಎಂದು ಹೇಳಿದ್ದೇನೆ ಮುಂದಿನ ವಿಷಯಕ್ಕೆ ಧರ್ಮಸಿಂಗ್‌ರವರನ್ನು ಕರೆದಿದ್ದೇನೆ. ಈ ಸಂದರ್ಭದಲ್ಲಿ ಯಾರೂ ಕ್ರಿಯಾಲೋಪವನ್ನು ಎತ್ತುವುದಕ್ಕೆ ಬರುವುದಿಲ್ಲವೆಂದು ನಿಮಗೂ ರೂಲಿಂಗ್ ಕೊಟ್ಟಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ

SRI G. MADEGOWDA.— I want a ruling from the Chair.

ಅಧ್ಯಕ್ಷರು.— ಆಗುವುದಿಲ್ಲ. ತಮಗೆ ಸ್ಪೆಷಲ್ ಆಗಿ ರೂಲಿಂಗ್ ಕೊಟ್ಟಿದ್ದೇನೆ. ದಯವಿಟ್ಟು ಕುಳಿತುಕೊಂಡು ವಿಶ್ರಾಂತಿ ತೆಗೆದುಕೊಳ್ಳಿ. ಮತ್ತೆ ನೀವೇನಾದರೂ ಹೇಳಿದರೆ ಯಾವುದೂ ರೆಕಾರ್ಡ್ ಆಗುವುದಿಲ್ಲ.

ಗಮನ ಸೆಳೆಯುವ ಸೂಚನೆಗಳು

೧ ಭೀಮಾನದಿಗೆ ಉಜ್ಜನಿ ಅಣೆಕಟ್ಟಿನಿಂದ ನೀರನ್ನು ಬಿಡುವುದು

ಶ್ರೀ ಧರ್ಮಸಿಂಗ್ (ಜೇವರ್ಗಿ).— ಸ್ವಾಮಿ, ಭೀಮಾ ನದಿಗೆ ಉಜ್ಜನಿ ಅಣೆಕಟ್ಟಿನಿಂದ ನೀರು ಬಿಡುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ ಈ ರೀತಿ ಇದೆ.

ಕಳೆದ ಎರಡು ವರ್ಷಗಳಲ್ಲಿ ಅಂದರೆ ೧೯೮೬ ಮತ್ತು ೧೯೮೭ರಲ್ಲಿ ಬರಗಾಲ ಪರಿಸ್ಥಿತಿಯಿಂದ ಕೃಷ್ಣ ಮತ್ತು ಭೀಮಾ ನದಿಗಳಲ್ಲಿ ಕುಡಿಯುವುದಕ್ಕೂ ಸಹ ನೀರು ಲಭ್ಯವಿಲ್ಲದ್ದರಿಂದ ಮಹಾರಾಷ್ಟ್ರ ಸರ್ಕಾರವನ್ನು ಕೋರಿ ಕೃಷ್ಣ ನದಿಯಲ್ಲಿ ೧೯೮೬ ಮತ್ತು ೧೯೮೭ರಲ್ಲಿ ಮತ್ತು ಭೀಮಾ ನದಿಯಲ್ಲಿ ೧೯೮೬ರಲ್ಲಿ ನೀರನ್ನು ಬಿಡಿಸಿಕೊಳ್ಳಲಾಗಿತ್ತು. ೧೯೮೭ರಲ್ಲಿ ಕೊಯ್ನ ಜಲಾಶಯದಿಂದ ನೀರನ್ನು ಬಿಡಿಸಿಕೊಳ್ಳಲು ಮಹಾರಾಷ್ಟ್ರ ಸರ್ಕಾರದೊಡನೆ ಚರ್ಚಿಸಿದಾಗ ಇನ್ನು ಮುಂದೆ ಮಹಾರಾಷ್ಟ್ರ ಸರ್ಕಾರದ ಜಲಾಶಯದಿಂದ ಕರ್ನಾಟಕಕ್ಕೆ ಕುಡಿಯುವ ನೀರಿಗಾಗಿ ನೀರು ಬಿಡಲು ಸಾಧ್ಯವಾಗುವುದಿಲ್ಲವೆಂದು, ನಮ್ಮರಾಜ್ಯದಲ್ಲಿರುವ ಜಲಾಶಯದಿಂದಲೇ ಈ ಉದ್ದೇಶಕ್ಕಾಗಿ ನೀರನ್ನು ಕಾದಿರಿಸಿಕೊಳ್ಳಬೇಕೆಂದು ಸೂಚಿಸಿದ್ದರು. ಆದರಂತೆ ಈ ವರ್ಷ ಕೃಷ್ಣ ನದಿಯ ದಂಡೆ ಮೇಲಿರುವ ಪಟ್ಟಣ ಮತ್ತು ಗ್ರಾಮಗಳ ಕುಡಿಯುವ ನೀರಿಗಾಗಿ ಘಟಪ್ರಭ ಜಲಾಶಯದಲ್ಲಿ ನೀರನ್ನು ಉಳಿಸಿಕೊಂಡು ಅದನ್ನು ಕೃಷ್ಣ ನದಿಗೆ ಬಿಡಲಾಗುತ್ತಿದೆ. ಭೀಮಾ ನದಿಯ ಮೇಲೆ ನಮ್ಮ ರಾಜ್ಯದಲ್ಲಿ ಯಾವ ಜಲಾಶಯವೂ ನಿರ್ಮಾಣವಾಗಿಲ್ಲ. ಮಹಾರಾಷ್ಟ್ರದ ಉಜ್ಜನಿ ಜಲಾಶಯವು ನಮ್ಮ ರಾಜ್ಯದ ಗಡಿಯಿಂದ ಸುಮಾರು ೧೦೪ ಮೈಲಿಗಳ ದೂರದಲ್ಲಿದೆ. ೧೯೮೭ರಲ್ಲಿ ಉಜ್ಜನಿ ಜಲಾಶಯದಿಂದ ನೀರು ಬಿಡಲು ಕೋರಿದರೂ ನೀರು ಬಿಡಲು ಮಹಾರಾಷ್ಟ್ರ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಧರ್ಮಸಿಂಗ್,—ಮಾನ್ಯ ಅಧ್ಯಕ್ಷರೆ. ಹೋದಸಾರಿಯೂ ಕೂಡ ಅವರು ಹೇಳಿದ್ದುದು ಪತ್ರಿಕೆಯಲ್ಲಿ ಬಂದಿತ್ತು. ನಾವೂ ಕೂಡ ಈ ಬಗ್ಗೆ ಹೇಳಿದ್ದೇವೆ, ಗುಲ್ಬರ್ಗ ಜಿಲ್ಲಾ ಪರಿಷತ್ತಿನಿಂದಲೂ ರೆಸಲ್ಯೂಷನ್ ಮಾಡಿ ಕಳುಹಿಸಿದ್ದಾರೆ. ಉಜ್ಜನಿ ಡ್ಯಾಮ್‌ನಿಂದ ಭೀಮಾ ನದಿಗೆ ನೀರು ಬಿಡುವ ಕೆಲಸ ಆಗಬೇಕು ಎಂದು ಹೇಳಿದ್ದೇವೆ. ಕರ್ನಾಟಕ ಸರ್ಕಾರದವರು ಮಹಾರಾಷ್ಟ್ರ ಸರ್ಕಾರಕ್ಕೆ ಕೇಳಿಕೊಳ್ಳಬೇಕು ಎಂದು ಹೇಳಿದ್ದೆವು. ಈ ಬಗ್ಗೆ ನೆಗೋಷಿಯೇಷನ್ ಆಗಿದೆಯೆ ? ಗುಲ್ಬರ್ಗ ಜಿಲ್ಲೆಯಲ್ಲಿ ಅಫ್ಜಲ್‌ಪುರ ಮತ್ತು ಜೇವರ್ಗಿ ತಾಲ್ಲೂಕುಗಳು ಭೀಮಾತೀರ ನದಿ ದಂಡೆಯಮೇಲೆ ಬರತಕ್ಕ ಜಾಗಗಳಲ್ಲಿ ನೀರೇ ಇಲ್ಲದೆ ತೊಂದರೆಯಾಗುತ್ತಿದೆ. ಕುಡಿಯಂವ ನೀರಿಗೂ ತೊಂದರೆಯಾಗುತ್ತಿದೆ. ಇದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು, ಉಜ್ಜನಿ ಡ್ಯಾಮ್ ೧೮೪ ಮೈಲಿ ದೂರ ಇರುವುದರಿಂದ ನೀರು ಬಿಡುವುದು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಇದಾಗದಿದ್ದರೆ ಬೇರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದರ ಬಗ್ಗೆ ನಿರ್ದಿಷ್ಟವಾದ ಉತ್ತರಬೇಕು. ಬರಗಾಲದಿಂದ ನೀರಿನ ಕೊರತೆ ಹೆಚ್ಚಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ನದಿ ದಂಡೆಯಲ್ಲಿರುವ ಎಲ್ಲಾ ಕಡೆ ನೀರಿಲ್ಲದೆ ತೊಂದರೆಯಾಗುತ್ತಿದೆ. ಜಿಲ್ಲಾ ಪರಿಷತ್ ವತಿಯಿಂದ ಅಧ್ಯಕ್ಷರು ಕೇಳಿದ್ದಾರೆ, ನಾವು ಕೇಳಿದ್ದೇವೆ. ಈ ಬಗ್ಗೆ ಸರ್ಕಾರದವರು ಏನು ಪರಿಹಾರ ಕಂಡುಹಿಡಿದಿದ್ದಾರೆ ?

ಶ್ರೀ ಹೆಚ್.ಡಿ. ದೇವೇಗೌಡ.— ಭೀಮಾ ನದಿಯ ಮೇಲೆ ಯಾವುದೇ ಜಲಾಶಯ ಇಲ್ಲ ಎಂಬುದು ನಿಜ. ಈ ಜಲಾಶಯ ನಿರ್ಮಾಣ ಮಾಡಿ ನೀರಾವರಿಗೆ ನೀರು ಕೊಡತಕ್ಕ ಕಾಲದಲ್ಲಿ ಕೆಲವೊಂದು ಭಾಗವನ್ನು ಕುಡಿಯುವ ನೀರಿಗೆ ಮೀಸಲಾಗಿಡಬೇಕಾದರೆ ಸಾಕಷ್ಟು ಕಾಲ ಹಿಡಿಯುತ್ತದೆ. ಕೃಷ್ಣಾ